# ಲಕ್ಷ್ಮೀಶನ ಜೈಮಿನಿಭಾರತದಲ್ಲಿ ಶೋಷಣೆಯ ನೆಲೆಗಳು

**ಅಶ್ವಿನಿ ಆರ್. ಎಸ್.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು.

**Article Link: https://aksharasurya.com/2023/12/ashwini-r-s/**

## ABSTRACT:

ಲಕ್ಷ್ಮೀಶನ ಜೈಮಿನಿ ಭಾರತ ಹಲವು ಕಥೆಗಳ ಒಂದು ಸಂಕಲನ. ವೈವಿಧ್ಯಮಯ ಉಪಕಥೆಗಳಿಂದ ವ್ಯಕ್ತಿ ಪ್ರಧಾನ ನೆಲೆಯಲ್ಲಿ ರಚಿತಗೊಂಡ ಸುಂದರ ಕಾವ್ಯ. ಸೀತೆ, ಬಬ್ರುವಾಹನ ಹಾಗೂ ಚಂದ್ರಹಾಸನ ಕಥೆಗಳು ಕರುಣಾ ರಸಗಳ ಸಂಗಮವಾಗಿವೆ. ಕಾವ್ಯದ ಪ್ರತಿ ಪಾತ್ರಗಳು ಮಾನವೀಯತೆಯ ನೆಲೆಯಲ್ಲಿ ಸಾಣೆಹಿಡಿದ ಸಮರ್ಥ ನಿರೂಪಣೆ ಎನಿಸಿದರೂ ಸೀತಾವನವಾಸ, ಬಬ್ರುವಾಹನನ ಕಾಳಗ ಹಾಗೂ ಚಂದ್ರಹಾಸನ ಬಾಲ್ಯದ ವಿವರಣೆಗಳು ಅಮಾನವೀಯತೆಯ ಸಂಕಟವನ್ನುಂಟುಮಾಡುತ್ತವೆ. ಕವಿ ತಾನು ಬದುಕಿದ್ದ ಸಾಮಾಜಿಕ ವಾತಾವರಣಕ್ಕೆ ಕಟ್ಟುಬಿದ್ದು ಈ ಪಾತ್ರಗಳನ್ನು ನಿರ್ವಹಿಸಿರುವುದು ದುರಂತವೇ ಸರಿ. ಎಲ್ಲಾ ಕಾಲದಲ್ಲೂ ಹೆಣ್ಣು ಶೋಷಣೆಗೆ ಒಳಪಡುವವಳು ಎಂಬುದನ್ನು ಸಾಬೀತುಮಾಡುವ ಸಾಮಾಜಿಕ ಶೋಷಣೆಯ ಪ್ರತೀಕದಂತೆ ಇಲ್ಲಿ ಸೀತೆ ಪಾತ್ರ ಚಿತ್ರಿಸಲ್ಪಟ್ಟಿದೆ. ವೈದಿಕಶಾಹಿ ವ್ಯವಸ್ಥೆ ಹಾಗೂ ಪ್ರಭುತ್ವ ಧೋರಣೆಗೆ ನಲುಗುವ ಪಾತ್ರಗಳಾಗಿ ಬಬ್ರುವಾಹನ ಹಾಗೂ ಚಂದ್ರಹಾಸರ ಪಾತ್ರಗಳು ಮೂಡಿಬಂದಿವೆ. ಹೀಗೆ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಈ ಮೂರು ಗತಿವಿಹೀನ ಪಾತ್ರಗಳ ಅಂತರಂಗಶೋಧನೆಯ ಕಿರು ಪ್ರಯತ್ನವೇ ಈ ಲೇಖನ.

## KEY WORDS:

ಲಕ್ಷ್ಮೀಶ, ಜೈಮಿನಿ ಭಾರತ, ಶೋಷಣೆಯ ನೆಲೆಗಳು, ಸೀತಾಪರಿತ್ಯಾಗ, ಅರ್ಜುನ–ಬಬ್ರುವಾಹನ ಕಾಳಗ, ಚಂದ್ರಹಾಸನ ಕಥೆ.

ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯಗಿರಿಯ ಅನೇಕ ಶಿಖರಗಳನ್ನು ಕಾಣುತ್ತೇವೆ. ಅದರಲ್ಲಿ ಲಕ್ಷ್ಮೀಶನದೇ ಒಂದು ಮಹೋನ್ನತ ಶಿಖರ. ಕರ್ಣಾಟಕ ಕವಿ ಚೂತವನ ಚೈತ್ರ ಎಂದೇ ಪ್ರಸಿದ್ಧನಾದ ಲಕ್ಷ್ಮೀಶನ ಜೈಮಿನಿ ಭಾರತವು ಸಾಹಿತ್ಯದ ವೈಭವವೆನಿಸುವಂತೆ ನಿರ್ಮಿತಿಗೊಂಡಿದೆ. ಈತನ

ಕಾಲ ಸು ಕ್ರಿ.ಶ. 1550. ಸ್ಥಳ ದೇವನೂರು. ದೇವಪುರದ ಲಕ್ಷ್ಮೀರಮಣ ಇವನ ಆರಾಧ್ಯದೈವ ಎಂಬುದು ಕವಿಚರಿತಾಕಾರರಿಂದ ತಿಳಿದುಬರುತ್ತದೆ. ಸಂಸ್ಕೃತದಲ್ಲಿ ಜೈಮಿನಿಮುನಿ ಬರೆದಿರುವ ಜೈಮಿನಿಭಾರತವನ್ನು ಕನ್ನಡಕ್ಕೆ ಒದಗಿಸಿಕೊಟ್ಟ ಕೀರ್ತಿ ಈತನಿಗೆ ಸಲ್ಲುತ್ತದೆ. ಮೂಲ ಕೃತಿಯನ್ನು ಆಧಾರವಾಗಿಟ್ಟುಕೊಂಡಿದ್ದರೂ ಲಕ್ಷ್ಮೀಶನು ರಸವತ್ತಾದ ಕಥನವನ್ನು ಚಿತ್ರಿಸುವ ಮೂಲಕ ತನ್ನ ಕಾವ್ಯ ಪ್ರತಿಭೆಯನ್ನು ಮೆರೆದಿದ್ದಾನೆ. ಕತೆ ಜೈಮಿನಿಮುನಿಯದಾದರೂ ಕಲೆ ಲಕ್ಷ್ಮೀಶನದೇ ಆಗಿದೆ. ಜೈಮಿನಿ ಭಾರತದಲ್ಲಿ ಪ್ರಧಾನವಾಗಿ ವೀರರಸ ಪ್ರತಿಪಾದಿತವಾಗಿದ್ದರೂ, ಮಿತವಾಗಿ ಭಕ್ತಿ ಮತ್ತು ಶೃಂಗಾರ ವರ್ಣನೆಗಳು ಬಳಕೆಗೊಂಡಿವೆ. ಈ ಕಾವ್ಯದಲ್ಲಿ ಲಕ್ಷ್ಮೀಶನೊಬ್ಬ ದೊಡ್ಡ ಕಥೆಗಾರ, ನಿಜವಾದ ಭಕ್ತಕವಿ ಹಾಗೂ ವಿಶಿಷ್ಟ ಮೋಹಕತೆ ಮತ್ತು ವೈವಿಧ್ಯಗಳುಳ್ಳ ಕನ್ನಡದ ನಾದಲೋಲ ಮತ್ತು ನಾದಪ್ರಿಯ ಎಂದು ತೋರಿದ್ದಾನೆ. ತನ್ನ ಕಾಲದೇಶ ಪರಿಸರದ ಮಧ್ಯೆ ಕವಿ ಲಕ್ಷ್ಮೀಶ ತನ್ನ ಸುತ್ತಲಿನ ಮಣ್ಣಿನ ವಾಸನೆಯನ್ನು ಮೈಗೂಡಿಸಿಕೊಂಡಿರುವುದು ವಿಶೇಷ. ತನ್ನಿಂದುಂಟಾದ ತೀವ್ರ ಭಾವ ಸಂವೇದನೆಗಳಿಗೆ ರೂಪುಕೊಟ್ಟು ನವನವೋನ್ಮೇಷಶಾಲಿಯಾದ ಪ್ರತಿಭೆಯ ಸಹಾಯದಿಂದ ಪುರಾಣಕತೆಯೊಂದಿಗೆ ತನ್ನ ಕಾಲದ ಸಮಷ್ಟಿಪ್ರಜ್ಞೆಯ ಸಂಕೇತವಾಗಿ ವಾರ್ಧಕ ಷಟ್ಪದಿಯಲ್ಲಿ ಜೈಮಿನಿಭಾರತವನ್ನು ರಚಿಸಿದ್ದಾನೆ. ಇದು 34 ಸಂಧಿಗಳು, 1910 ಪದ್ಯಗಳಿಂದ ಕೂಡಿದೆ.

ಜೈಮಿನಿ ಭಾರತದಲ್ಲಿ ಕವಿ ಕತೆಯನ್ನು ಹೇಳುತ್ತಲೇ, ಸಂಪೂರ್ಣ ತನ್ಮಯವಾಗಿ ಉತ್ಪ್ರೇಕ್ಷೆಗಳ ಮಾಲೆಗಳನ್ನು ಕಟ್ಟಿದ್ದಾನೆ. ಮಧುರವಾದ ಲಯದಿಂದ ಮಾತುಗಳ ಸಂಪತ್ತಿನ ಬಲೆಯನ್ನು ಹೆಣೆದಿದ್ದಾನೆ, ಆ ಮೂಲಕ ಸಹೃದಯರಿಗೆ ರಸದೌತಣವನ್ನು ಉಣಬಡಿಸಿದ್ದಾನೆ. ಜೊತೆಗೆ ಪುರಾಣದಲ್ಲಿ ಪಟ್ಟಭದ್ರ ವ್ಯವಸ್ಥೆಯಿಂದ ತುಳಿತಕ್ಕೊಳಗಾದ ಪಾತ್ರಗಳನ್ನು ಚಿತ್ರಿಸುತ್ತಾನೆ. ಶೋಷಕರ ವಿರುದ್ಧ ಮೌನ ಮುರಿದು ಮಾತನಾಡುವ, ಆ ಮೂಲಕ ತಮ್ಮ ಅಸ್ತಿತ್ವಕ್ಕಾಗಿ ಅವಶ್ಯವಾಗಿ ಹೋರಾಡುವ ಪಾತ್ರಗಳನ್ನು ನಿರ್ಮಿಸಿದ್ದಾನೆ. ಅಲ್ಲಲ್ಲಿ ಶೋಷಕರ ಪರನಿಂತು ಅಪರಾಧಿ ಸ್ಥಾನದಲ್ಲಿ ಕಾಣಿಸಿಕೊಳ್ಳುವುದು ಅವನ ಕಾವ್ಯದ ಪಾತ್ರಗಳಿಂದಲೇ. ವೈದಿಕ ಧರ್ಮದ ಕಟ್ಟುಪಾಡುಗಳಿಗೆ ಸಿಲುಕಿ ನಲುಗಿಹೋಗುವ, ಶೋಷಣೆಗೊಳಗಾಗುವ ಕೆಲವು ಪಾತ್ರಗಳು ಲಕ್ಷ್ಮೀಶನ ಕಾವ್ಯದಲ್ಲಿ ಚಿತ್ರಿತಗೊಂಡಿವೆ. ಈ ಹಿನ್ನೆಲೆಯಲ್ಲಿ ಸೀತೆ, ಬಭ್ರುವಾಹನ ಮತ್ತು ಚಂದ್ರಹಾಸರ ಪಾತ್ರಗಳು ಮುಖ್ಯವಾಗಿ ಗುರುತಿಸಬಹುದಾದವು. ಕಾವ್ಯದಲ್ಲಿ ಚಿತ್ರಿತಗೊಂಡಿರುವ ಈ ಪಾತ್ರಗಳ ಹಿನ್ನೆಲೆಯಲ್ಲಿ ಶೋಷಿತ ನೆಲೆಗಳನ್ನು ಗುರುತಿಸುವ ಒಂದು ಪ್ರಯತ್ನ ಈ ಲೇಖನದ ಉದ್ದೇಶವಾಗಿದೆ.

ವೈದಿಕ ಧರ್ಮದಲ್ಲಿ ಹೆಣ್ಣು ಮಾಯೆ, ಸರ್ವ ಅನರ್ಥಗಳಿಗೂ ಆಕೆಯೇ

ಕಾರಣ, ಆಕೆಗೆ ಸ್ವಾತಂತ್ರ್ಯ ಸಲ್ಲದು, ಆಕೆಗೆ ಧಾರ್ಮಿಕ ಸ್ವಾತಂತ್ರ್ಯದ ಅವಶ್ಯಕತೆ ಇಲ್ಲ ಎಂದು ತುಳಿಯಲ್ಪಟ್ಟವಳು. ವಚನಕಾರರು ಅಜ್ಞಾನ ಅಂಧಕಾರದಲ್ಲಿ ಮುಳುಗಿ ತಮ್ಮತನವನ್ನೇ ಕಳೆದುಕೊಂಡ ಸ್ತ್ರೀಯರಿಗೆ ಶಕ್ತಿರೂಪ ನೀಡಿ ಅಭೂತಪೂರ್ವ ಗೌರವವನ್ನು ಕೊಟ್ಟು ಆಕೆಯನ್ನು ದೈವತ್ವಕ್ಕೇರಿಸಿದರು. ಶಿವಯೋಗಿ ಸಿದ್ಧರಾಮರು...

**ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತ್ತು**
**ತಾ ಮಾಡಿದ ಹೆಣ್ಣು ತನ್ನ ತೊಡೆಯನ್ನೇರಿತ್ತು**
**ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನ್ನೇರಿತ್ತು**
**ತಾ ಮಡಿದ ಹೆಣ್ಣು ನಾರಾಯಣನ ಎದೆಯನ್ನೇರಿತ್ತು**
**ಅದು ಕಾರಣ ಹೆಣ್ಣು ರಾಕ್ಷಸಿಯಲ್ಲ**
**ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ದಮಲ್ಲಿಕಾರ್ಜುನ ನೋಡಾ.**

ಎನ್ನುತ್ತಾನೆ. ಹೆಣ್ಣು ಶಿವನ ತೊಡೆಯಲ್ಲಿ ಶೋಭಿಸಿ ಬ್ರಹ್ಮನ ನಾಲಗೆಯಲ್ಲಿ ನರ್ತಿಸಿ, ನಾರಾಯಣನ ಹೃದಯದಲ್ಲಿ ನೆಲೆಸಿ ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನನ ಸ್ವರೂಪವನ್ನು ಪಡೆದಿದ್ದಾಳೆ ಎನ್ನುತ್ತಾರೆ. ಆದರೆ ಲಕ್ಷ್ಮೀಶನು ಚಿತ್ರಿಸಿದ ಸ್ತ್ರೀ ಪಾತ್ರಗಳಲ್ಲಿ ಸೀತೆಯು ಅತ್ಯಂತ ಶೋಷಣೆಗೊಳಗಾದವಳು. ಅಯೋಧ್ಯಾ ಸಾಮ್ರಾಜ್ಯದ ಪಟ್ಟದ ರಾಣಿಯಾಗಿದ್ದರೂ, ಪರಿತ್ಯಾಗದ ಅನ್ಯಾಯಕ್ಕೆ ಒಳಗಾಗಿ ಕಾಡುಪಾಲಾದವಳು. ಆಕೆ ಅನುಭವಿಸಿದ ನೋವು ಕಲ್ಲನ್ನು ಕರಗಿಸುವಂಥದ್ದು, ಲಕ್ಷ್ಮಣನಿಂದ ಪರಿತ್ಯಾಗದ ಕಾರಣವನ್ನು ತಿಳಿದೊಡನೆ ತುಂಬು ಬಸುರಿಯಾದ ಆಕೆ 'ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆ ಗೊರಗುವಂತೆ' ಹಮ್ಮೈಸಿ ನೆಲಕ್ಕೆ ಬೀಳುತ್ತಾಳೆ, ಮೂರ್ಛೆಯಿಂದೆಚ್ಚೆತ್ತು ಎಳೆ ಮಗುವಿನಂತೆ ಪ್ರಲಾಪಿಸುತ್ತಾಳೆ. ಈ ಸಂದರ್ಭದಲ್ಲಿ ಲಕ್ಷ್ಮೀಶನು ಸೀತೆಯ ಮನಸ್ಸಿನಲ್ಲಾಗುವ ತಳಮಳ, ಆತಂಕ, ದುಃಖ ಮತ್ತು ಹೆಣ್ಣಿನ ಅಸಹಾಯಕ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಶತಮಾನದಿಂದ ಪುರುಷನ ದಬ್ಬಾಳಿಕೆಗೆ ಬಲಿಯಾಗುತ್ತಿರುವ ಹೆಣ್ಣಿನ ಪ್ರತಿನಿಧಿಯಂತೆ ಇಲ್ಲಿ ಸೀತೆ ಗೋಚರಿಸಿದರೆ, ಶೋಷಕ ವರ್ಗದ ಪ್ರತಿನಿಧಿಯಂತೆ ರಾಮ ಕಾಣಿಸಿಕೊಳ್ಳುತ್ತಾನೆ.

ಇಷ್ಟೆಲ್ಲಾ ಯಾತನೆಗಳ ನಡುವೆಯೂ ಕರುಣಾಮಯಿಯಾದ ಸೀತೆಯು ರಾಘವನ ರಮಣೀಯ ಗುಣಮಾಲೆಯನ್ನು ನೆನೆದು ಲಕ್ಷ್ಮಣನನ್ನೇ ಸಂತೈಸುತ್ತಾಳೆ. 'ನಿನ್ನೊಳೆಂದೊಡಿನ್ನೇನಹುದು' ನನ್ನನ್ನು ನಾನೇ ಕೊಂದು ಕೊಳ್ಳೋಣ ಎಂದರೆ 'ಬೆಂದೊಡಲೊಳಿದೆ ಬಸಿರದಂದುಗಂ' ಎಂದು ಶೋಕಿಸುತ್ತಾಳೆ. ಸ್ವಾಭಿಮಾನ ನೋವುಂಡ ಅವಳಲ್ಲಿ ಜಾಗೃತವಾಗುತ್ತಿದೆ. ಬಂದುದ್ದನ್ನು ಧೈರ್ಯವಾಗಿ ಎದು ರಿಸುವ ದಿಟ್ಟ ನಿಲುವಿಗೆ ಆಕೆಯ ಮನ ಪರಿವರ್ತಿತವಾಗಿದೆ. ಅದಕ್ಕೆ ಅವಳು

**ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ**

**ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ**
**ದೊಡಲಂ ಪೊರೆವುದೆನ್ನೊಳಪರಾಧಮುಂಟು**

ಎಂದು ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಾಳೆ. ತನ್ನ 'ಹೆಣ್ಣು ಜನ್ಮವೇ ಪಾಪದ ಪ್ರತಿಫಲ' ಎಂದು ಅಸಹಾಯಕತೆಯಿಂದ ನುಡಿಯುತ್ತಾಳೆ. ಸಮಾಜ ಅನಾದಿಕಾಲದಿಂದಲೂ ಹೆಣ್ಣನ್ನು ಎರಡನೆಯ ದರ್ಜೆಯವಳಾಗಿ ಕಂಡು ನಿರಂತರ ಶೋಷಣೆಗೆ ಒಳಗುಮಾಡಿದೆ. ಅಂತೆಯೇ ಕವಿ ಲಕ್ಷ್ಮೀಶ ಕೂಡ ಪುರುಷರ ಪ್ರಾಧಾನ್ಯತೆಯನ್ನು ಎತ್ತಿಹಿಡಿದಿದ್ದಾನೆ ಎಂಬುದು ಸೀತೆಯ ಶೋಷಣೆಯ ಪ್ರಸಂಗದಲ್ಲಿ ಗೋಚರಿಸುತ್ತದೆ. ಇಲ್ಲಿ ಶೋಷಣೆ ಎನ್ನುವುದು ಹೆಣ್ಣಿಗೆ ಮುಕ್ತಿ ಕಾಣದ ಶಾಪವಾಗಿ ದೃಢಪಟ್ಟಂತಿದೆ. ಲಕ್ಷ್ಮಣ ಆಕೆಯಿಂದ 'ತಾಯನೆಳೆಗರು ಬಿಚ್ಚುವಂತೆ' ಅಗಲುತ್ತಾನೆ. ಎಳೆಎಳೆದಷ್ಟು ಕರು ಹೆಚ್ಚೆಚ್ಚು ತಾಯ ಮಡಿಲನ್ನು ಸೇರಬಯಸುವಂತೆ ಭಯ, ಶೋಕಗಳಿಂದ ಸೀತೆ ಬಸವಳಿಯುತ್ತಾಳೆ. ಆಕೆಯ ಅಸಹಾಯಕತೆ, ಏಕಾಂಗಿತನದ ನೋವು ಹೃದಯವಿದ್ರಾವಕವಾಗಿ ಈ ಭಾಗದಲ್ಲಿ ನಿರೂಪಣೆಗೊಂಡಿದೆ.

ಜೈಮಿನಿಭಾರತ ಕಾವ್ಯದಲ್ಲಿ ಪಾಂಡವರ ಕಥೆ ಆನುಷಂಗಿಕವಾಗಿದ್ದು ಕೃಷ್ಣಚರಿತೆಯ ಪ್ರಕಾಶಕ್ಕೂ ಹೆಚ್ಚು ಮಹತ್ವವನ್ನು ನೀಡುವ ಮೂಲಕ ಕೃತಿಯನ್ನು ಕೃಷ್ಣಭಕ್ತರ ಕಥಾಗುಚ್ಛವನ್ನಾಗಿಸಿದ್ದಾನೆ. ಇಲ್ಲಿಯೂ ನಿಂದನೆ ಮತ್ತು ಶೋಷಣೆಗೆ ಒಳಗಾಗುವ ಪಾತ್ರ ಒಂದಿದೆ. ಅದು ಬಬ್ರುವಾಹನನ ಪಾತ್ರ. ಈತ ಮಣಿಪುರದ ಅರಸ. ಪಾಂಡವರ ಯಜ್ಞಾಶ್ವವನ್ನು, ಪಟ್ಟದ ಲಿಪಿಯನ್ನು ಓದಿ ಕಟ್ಟಿಹಾಕುತ್ತಾನೆ. ಮರುದಿನ ಯುದ್ಧ ನಿಶ್ಚಯವಾಗುತ್ತದೆ. ತಾಯಿ ಚಿತ್ರಾಂಗದೆಯು ಸಂಗತಿಯನ್ನು ತಿಳಿದು 'ಕುಂತೀ ಸುತನ ವಾಜಿಯಂ ಕಟ್ಟಿದೈ ಮಗನೆ ಲೇಸುಮಾಡಿದೆ' ಎಂದು ವ್ಯಂಗ್ಯವಾಡಿ ಗುರುದ್ರೋಹಕ್ಕೆ ತೊಡಗಬೇಡ, ಯಜ್ಞಾಶ್ವವನ್ನು ಹಿಂದಿರುಗಿಸು ಎಂದು ಎಚ್ಚರಿಸುತ್ತಾಳೆ. ವೀರನಾದ ಬಬ್ರುವಾಹನ ತಾನು ಅರ್ಜುನನ ಮಗನೆಂದು ತಾಯಿಯಿಂದ ತಿಳಿದಾಗ 'ಸರ್ವಸ್ವಮಂತಾತನಂಘ್ರಿಗೆ ಸಮರ್ಪಿಸುವುದು' ಎಂದು ತೀರ್ಮಾನಿಸುತ್ತಾನೆ. ಸೂರ್ಯೋದಯದ ಅನಂತರ ಅರ್ಜುನನು ಕಳದಲ್ಲಿ ವ್ಯೂಹವನ್ನು ರಚಿಸಿ ಸಿದ್ಧನಾಗಿರುತ್ತಾನೆ. ಹೀಗಿರುವಾಗ ಬಬ್ರುವಾಹನ ಅವನ ಬಳಿಗೆ ಬಹಳ ವಿನಯದಿಂದ ಬಂದು ಕಿರೀಟವನ್ನು ತೆಗೆದು ಕಿರೀಟಿಯ ಅಡಿಗಳ ಮೇಲೆ ತಲೆಯಿಟ್ಟು 'ನಿನ್ನಾತ್ಮಜಂತಾನ್ ಮಾತೆ ಚಿತ್ರಾಂಗದೆ ಸಲಹಿದವಳುಲೂಪಿ ನೀನಂದು ತೀರ್ಥಯಾತ್ರೆಗೆ ಬಂದಿರೆ ಜಾತನಾದೆಂ.... ಈ ತುರುಗಮಂ ಪಿಡಿದು ಕಟ್ಟಿ ತಪ್ಪಿದೆ ಕ್ಷಮಿಸೆಂದು' ಪ್ರಾರ್ಥಿಸುತ್ತಾನೆ. ಅರ್ಜುನನು ಸಿಟ್ಟಿನಿಂದ 'ತಲೆ ಪೋಪುದಕೆ ಕಾಲ್ಬೊಣೆಯೆಂಬ' ನಾಣ್ಣುಡಿ ತಪ್ಪದೆಂಬಂತೆ ಕಾಲಿನಿಂದ ಒದೆದು 'ನೀಂ ಪಂದೆ ಲೋಕದೊಳ್ ತನಗೆ ಸಂಭವಿಸಿದವನೀ ಪರಿಯಾಳಂಜುವನೆ

ಮೊದಲಶ್ವಮಂ ಕಟ್ಟಿ ಮತ್ತೆ ಕಾದದೆ ಬಿಡುವನೆ' ಎನ್ನುತ್ತಾ ನೀನು ಚಿತ್ರಾಂಗದೆಗೆ ವೇಶ್ಯೆಯಿಂದ ಸಂಭವಿಸಿರಬೇಕು ಎನ್ನುತ್ತಾನೆ. 'ನಿನ್ನ ಮಾತೆ ನರ್ತಕಿಯಲಾ.... ಗಂಧರ್ವನಾಯಕನ ದುಹಿತೃವಲಾ' ಎಂದು ಕಟುವಾಗಿ ನಿಂದಿಸುತ್ತಾನೆ. ಇಲ್ಲಿ ಉಳ್ಳವರ ಪ್ರತಿನಿಧಿಯಂತೆ ಕಾಣುವ ಅರ್ಜುನ ತನ್ನ ಅಧಿಕಾರದ ಮದವನ್ನು ಮೆರೆಯುತ್ತಾನೆ. ತಾನು ಏನು ಮಾತಾಡಿದರೂ ಸರಿ ಎಂಬಂತೆ ಶರಣಾಗಲು ಬಂದ ಬಬ್ರುವಾಹನನನ್ನು ನಿಂದಿಸುತ್ತಾನೆ. ಹೆಣ್ಣಿಗೆ ಶೀಲವೇ ಮುಖ್ಯ. ಪರಸ್ತ್ರೀಯೊಬ್ಬಳ ಶೀಲದ ಬಗ್ಗೆ ಅಶ್ಲೀಲವಾಗಿ ಮಾತನಾಡುವ ಅರ್ಜುನ ತನ್ನ ಕೊಳಕು ಮನಸ್ಸನ್ನು ಪ್ರದರ್ಶಿಸುತ್ತಾನೆ. ಇಲ್ಲಿ ಬಬ್ರುವಾಹನ ಕುದುರೆ ಹಿಂದಿರುಗಿಸುವುದು ಮಾತೃವಾಕ್ಯ ಪರಿಪಾಲನೆಗಾಗಿ ಹೊರತು, ಯುದ್ಧವಿಮುಖನಾಗಿ ಅಲ್ಲ. ಇಂತಹ ಸಂದರ್ಭದಲ್ಲಿ ಅರ್ಜುನ ಶಾಂತಿಯಿಂದ, ತಾಳ್ಮೆಯಿಂದ ವರ್ತಿಸಬಹುದಿತ್ತು. ಅವನನ್ನು ಒದೆಯುವ, ಅವನ ಹುಟ್ಟನ್ನು ಕುರಿತು ಚಿತ್ರಾಂಗದೆಯನ್ನು ನಿಂದಿಸುವ ಅಪರಾಧ ಮಾಡಬಾರದಿತ್ತು ಎನಿಸುತ್ತದೆ. ಇದು ಅರ್ಜುನನ ದರ್ಪ, ಅಹಂಕಾರದ ಪ್ರತೀಕವೆಂಬಂತಿದೆ. ಆತನ ವೀರತ್ವಕ್ಕೆ ವಿರುದ್ಧವಾದುದಾಗಿದೆ. ಈ ಹಿನ್ನೆಲೆಯಲ್ಲಿ ಲಕ್ಷ್ಮೀಶನ ಕಾವ್ಯದಲ್ಲಿ ವ್ಯಕ್ತವಾಗಿರುವ ಜಾತಿನಿಂದನೆಯೊಟ್ಟಿಗೆ ಸ್ತ್ರೀ ಶೋಷಣೆಯ ನೆಲೆಗಳನ್ನು ಗುರುತಿಸಬಹುದಾಗಿದೆ.

ಜೈಮಿನಿಭಾರತದಲ್ಲಿ ಚಂದ್ರಹಾಸನದು ಶೋಷಣೆಗೆ ಒಳಗಾದ ಮತ್ತೊಂದು ಪಾತ್ರ. ಈತ ನಿಂದನೆಗಳಿಗೆ ಸಿಲುಕಿ ಜರ್ಜರಿತನಾಗುವ ಸಂದರ್ಭಗಳು ಇಲ್ಲಿ ಸಾಕಷ್ಟು ಕಡೆ ಗುರುತಿಸಲ್ಪಡುತ್ತವೆ. ಸತತ ಕಂಟಕ, ಪ್ರತಿರೋಧಗಳ ನಡುವೆಯೇ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಹೋರಾಡಿ ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಾನೆ. ಈ ಹಿನ್ನೆಲೆಯಲ್ಲಿ ಚಂದ್ರಹಾಸನ ಕತೆ ಚಿತ್ರಣಗೊಂಡಿದೆ. ಒಳಿತು ಕೆಡುಕುಗಳ ನಡುವಿನ ಸಂಘರ್ಷ, ವೈದಿಕಶಾಹಿ ವ್ಯವಸ್ಥೆ ನಿರ್ಮಿಸಿದ ಶಕುನ, ಅಪಶಕುನ ಮುಂತಾದವು ಈ ಕಥೆಯಲ್ಲಿ ಆವರಿಸಿವೆ. ಅನಾಥ ಬಾಲಕನೊಬ್ಬನ ಬದುಕಿನುದ್ದಕ್ಕೂ ಒದಗಿದ ವಿಪತ್ತುಗಳನ್ನು ಎದುರಿಸಿ ನೋವಿನ ಪ್ರಸಂಗವನ್ನು ವರವಾಗಿ ಪರಿವರ್ತಿಸಿಕೊಳ್ಳುವ ಪ್ರಸಂಗವೇ ಚಂದ್ರಹಾಸನ ಕತೆ. ಮೇಧಾವಿ ಮತ್ತು ಚಿತ್ರಭಾನು ಎಂಬ ರಾಜದಂಪತಿಗಳಿಗೆ ಮೂಲ ನಕ್ಷತ್ರದಲ್ಲಿ ಎಡಗಾಲಿನಲ್ಲಿ ಆರು ಬೆರಳಿದ್ದ ಒಬ್ಬ ಮಗ ಹುಟ್ಟುತ್ತಾನೆ. ಈತನೇ ಚಂದ್ರಹಾಸ. ಇವನು ಹುಟ್ಟುತ್ತಲೇ ಶತೃಗಳು ನಗರವನ್ನು ಪ್ರವೇಶಿಸುತ್ತಾರೆ. ಯುದ್ಧದಲ್ಲಿ ಹೋರಾಡುತ್ತಾ ರಾಜ ಮೇಧಾವಿ ಅಸುನೀಗುತ್ತಾನೆ. ರಾಣಿ ಸಹಗಮನ ಮಾಡುತ್ತಾಳೆ. ಮುಂದೆ ದಾಸಿಯೊಬ್ಬಳ ಆಶ್ರಯದಲ್ಲಿ ಕುಂತಳ ದೇಶದಲ್ಲಿ ಚಂದ್ರಹಾಸ ಬೆಳೆಯುತ್ತಿರುತ್ತಾನೆ. ಕಾಲಾನಂತರ ಆಕೆಯು ವಿಧಿವಶಳಾಗಿ ಮಗು ಅನಾಥವಾಗಿ ಬೆಳೆಯುತ್ತದೆ. ಇಲ್ಲಿ ಚಂದ್ರಹಾಸನ ಹುಟ್ಟು ಇಷ್ಟೆಲ್ಲಾ

ಕೃತ್ಯಗಳಿಗೂ ಕಾರಣ ಎಂಬಂತೆ, ಅಪಶಕುನ ಎಂಬಂತೆ ಕಂಡುಬರುತ್ತದೆ. ಆದರೆ ಅನಾಥ ಮಗುವಿನ ಮುಖ ಲಕ್ಷಣ ನೋಡಿ 'ಕುಂತಳ ರಾಜನಾಗುತ್ತಾನೆ' ಎಂದು ವಿಪ್ರರು ನುಡಿಯುತ್ತಾರೆ. ಇದರಿಂದ ಕುಪಿತಗೊಂಡು ಮಂತ್ರಿ ದುಷ್ಟಬುದ್ಧಿಯು ಅವನನ್ನು ಕೊಲ್ಲಲು ಆಜ್ಞಾಪಿಸುತ್ತಾನೆ ಮತ್ತು ಕುರುಹು ತಂದು ತೋರಬೇಕೆಂದು ಅಪ್ಪಣೆಮಾಡುತ್ತಾನೆ. 'ಕಾಗೆಗಳ ಸಂಘಾತದೊಳ್ ಸಿಕ್ಕಿರ್ದ ಕೋಗಿಲೆ ಮರಿಯಂತೆ' ಬಾಲಕ ಸಿಕ್ಕಿಬಿದ್ದಿದ್ದಾನೆ. 'ಆ ಬಾಲಕನ ಮೊಗ ನೋಡಿ ಕರುಣದಿಂದ ಕಟುಕರೆದೆ ಕರಗಿ' ಆರನೆಯ ಬೆರಳನ್ನು ಕತ್ತರಿಸಿ ಒಡೆಯನಿಗೆ ಕುರುಹಾಗಿ ತೋರುತ್ತಾರೆ. ಗಾಯದ ವೇದನೆಯಿಂದ ಅಳುತ್ತಿದ್ದ ಹಸುಳೆಯನ್ನು ನೋಡಿ ವನದಲ್ಲಿನ ಪಶು, ಪಕ್ಷಿ, ಮೃಗ ಭಾಗಿಗಳಾಗಿ ಸಂತಾಪ ವ್ಯಕ್ತಪಡಿಸುತ್ತವೆ.

'ಕರುಬರಿದ್ದೂರಿಂದ ಕಾಡೊಳ್ಳಿತೆನಿಸುವಂತೆ' ಎನ್ನುವ ಮಾತು ಮನುಷ್ಯನ ಪ್ರಾಣಿತನವನ್ನು ವ್ಯಕ್ತಪಡಿಸುತ್ತದೆ. ಕಾಡಿನಲ್ಲಿರುವ ಪ್ರಾಣಿ ಪಕ್ಷಿಗಳು ಚಂದ್ರಹಾಸನ ಸ್ಥಿತಿಯನ್ನು ಕಂಡು ಮರುಗುತ್ತವೆ. ಆದರೆ ಮಾನವ ತನ್ನ ವೈಯಕ್ತಿಕ ಪ್ರತಿಷ್ಠೆಯ ಸಲುವಾಗಿ ಮಾನವೀಯತೆಯನ್ನು ಮರೆತು ಮೃಗದ ತೆರನಾಗಿ ಎರಗುವುದು ಆತನ ಕ್ರೂರತನದ ಪ್ರತೀಕವೆನಿಸುತ್ತದೆ. ಉಳ್ಳವರು ಇಲ್ಲದವರ ಮೇಲೆರಗಿ ಸರ್ವನಾಶಗೊಳಿಸುವ ಪ್ರಕ್ರಿಯೆ ಇಂದು ನಿನ್ನೆಯದಲ್ಲ ಬಹಳ ಹಿಂದಿನಿಂದಲೂ ಸತತವಾಗಿ ನಡೆಯುತ್ತಲೇ ಬಂದಿದೆ. ತುಳಿಸಿಕೊಂಡವರ, ನೊಂದವರ ಮೂಕವೇದನೆಯ ಮುಖವಾಣಿ ಎಂಬಂತೆ ಅಲ್ಲಲ್ಲಿ ನೆಲೆ ಸಿಕ್ಕರೂ ಮತ್ತೆ ಅದು ಉಳ್ಳವರ ವಶವಾಗುತ್ತದೆ. ಇಂತಹ ಅಂಶಗಳು ಈ ಕಥೆಯಲ್ಲಿ ಕಾಣಸಿಗುತ್ತವೆ. ಅನಾಥ ಬಾಲಕ ಚಂದ್ರಹಾಸನಿಗೆ ಆಶ್ರಯವಾಗಿ ಕುಳಿಂದಕ ಪ್ರವೇಶಿಸುತ್ತಾನೆ. ಚಂದ್ರಹಾಸನನ್ನು ಸಾಕಿ ವಿದ್ಯಾಭ್ಯಾಸಕ್ಕೆ ತೊಡಗಿಸಿ ವೇದ ಶಾಸ್ತ್ರಗಳನ್ನು ಕಲಿಸುತ್ತಾನೆ. ಮತ್ತೆ ದುಷ್ಟಬುದ್ಧಿಯ ಕ್ರೂರ ದೃಷ್ಟಿಗೊಳಗಾಗಿ ಪ್ರಾಣವನ್ನು ಕಳೆದುಕೊಳ್ಳುವ ಸ್ಥಿತಿಗೆ ತಲುಪುತ್ತಾನೆ. ಆದರೆ ದುಷ್ಟಬುದ್ಧಿಯ ಕಪಟಪತ್ರದಿಂದ ಬದುಕುಳಿದು ವಿಷಯೆಯನ್ನು ವರಿಸುತ್ತಾನೆ. ಚಂದ್ರಹಾಸನ ಕತೆ ಸುಖಾಂತ್ಯವಾಗಿ ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಕತೆಯ ಒಳಹೊಕ್ಕು ಸೂಕ್ಷ್ಮವಾಗಿ ಗಮನಿಸಿದಾಗ ಉಳ್ಳವರ ಕುಂತತ್ರ, ದೌರ್ಜನ್ಯ ಮುಂತಾದವು ಎಳೆ ಎಳೆಯಾಗಿ ಬಿಚ್ಚಿಕೊಳ್ಳುತ್ತದೆ. ಹೀಗೆ ಕವಿ ಲಕ್ಷ್ಮೀಶ ದುಷ್ಟಬುದ್ಧಿಯೆಂಬ ಪಾತ್ರ ಚಿತ್ರಣದ ಮೂಲಕ ಅನಾಥ, ಮುಗ್ಧ ಬಾಲಕ ಚಂದ್ರಹಾಸನನ್ನು ಕೊಲ್ಲಲು ಹೂಡಿದ ಅಮಾನುಷವಾದ ತಂತ್ರಗಳನ್ನು ತೆರೆದಿಡುತ್ತಾನೆ.

ಒಟ್ಟಾರೆಯಾಗಿ ಲಕ್ಷ್ಮೀಶನ ಜೈಮಿನಿಭಾರತ ಕಾವ್ಯದಲ್ಲಿ ವೈದಿಕ ಪರಂಪರೆಯ ಸಂಪ್ರದಾಯವನ್ನೊಳಗೊಂಡ ನಿಲುವುಗಳನ್ನು ಮೌನವಾಗಿಯೇ ವಿರೋಧಿಸುವ

ಪಾತ್ರಗಳಾಗಿ ಸೀತೆ, ಬಬ್ರುವಾಹನ ಮತ್ತು ಚಂದ್ರಹಾಸ ಕಾಣಿಸಿಕೊಂಡಿದ್ದಾರೆ. ಸೀತೆಯು ತನ್ನ ಜೀವನದುದ್ದಕ್ಕೂ ಹಲವಾರು ನೋವುಗಳನ್ನು ಅನುಭವಿಸಿದರೂ ಅವಳು ಎಲ್ಲಿಯೂ ನೇರವಾಗಿ ಪ್ರತಿಭಟನೆಯ ಧ್ವನಿ ಎತ್ತುವುದಿಲ್ಲ ಎಲ್ಲದಕ್ಕೂ ತಾನು ಒಗ್ಗಿಕೊಂಡು ಹೋಗುತ್ತಾಳೆ. ಶ್ರೇಣೀಕೃತ ಸಾಮಾಜಿಕ ಸಂರಚನೆಯ ಹಾದಿಯಲ್ಲಿ ವರ್ಣ, ವರ್ಗ, ಜಾತಿಗಳು ಭಾರತೀಯ ನೆಲೆಯಲ್ಲಂತೂ ಹೆಣ್ಣನ್ನು ಒಂದು ವಸ್ತುವಾಗಿ ನೋಡಿವೆ, ವಿಜೃಂಭಿಸಿ ಹೊಗಳಿ ಅಟ್ಟಕ್ಕೇರಿಸಿವೆ. ಅಷ್ಟೇ ಏಕೆ ಗೌರವಿಸುವ ನೆಪದಲ್ಲಿ ಸ್ವಾತಂತ್ರ್ಯ ಹರಣಗೈದಿವೆ. ಸ್ತ್ರೀ ಪುರುಷನ ಕನಸುಗಳಿಗೆ ಸ್ಪಂದಿಸಬೇಕೆಂದು ಪುರುಷನ ಒಡೆತನದ ಹಂಗಿನ ಮಾತು. ಇಂತಹ ಪರಿಸ್ಥಿತಿಯಲ್ಲಿ ಸೀತೆಯು ಮುಗ್ಧತನದಿಂದಲೇ ತಾನು ಸಿಲುಕಿಕೊಂಡಿರುವ ಸಮಸ್ಯೆಯಿಂದ ಮುಕ್ತಳಾಗಲು ಪರಿಹಾರವನ್ನು ಹುಡುಕುತ್ತಾಳೆ, ಅಸಹಾಯಕತೆಯಿಂದ ದುಃಖಿಸುತ್ತಾಳೆ. ಹೀಗೆ ಪರಂಪರೆಯಿಂದಲೂ ನೆಲೆಯಾಗಿದ್ದ ಸ್ತ್ರೀ ಶೋಷಣೆ, ವರ್ಣವ್ಯವಸ್ಥೆ, ಅಸಹಾಯಕರ, ಅನಾಥರ, ಮಕ್ಕಳ ಮೇಲಿನ ದಬ್ಬಾಳಿಕೆಯನ್ನು ಲಕ್ಷ್ಮೀಶನ ಈ ಮೂರು ಪಾತ್ರಗಳು ಅನಾವರಣಗೊಳಿಸುತ್ತವೆ. ಆ ಪಾತ್ರಗಳು ಅನುಭವಿಸುವ ಹಿನ್ನೆಲೆಯಲ್ಲಿ ಇಲ್ಲಿ ಶೋಷಣೆಯ ನೆಲೆಗಳನ್ನು ಗುರುತಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಸಣ್ಣಯ್ಯ ಬಿ. ಎಸ್. ರಾಮೇಗೌಡ (ಸಂ) (1993). ಲಕ್ಷ್ಮೀಶನ ಜೈಮಿನಿ ಭಾರತ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
2. ಮರುಳಸಿದ್ದಪ್ಪ ಕೆ. (2013). ಷಟ್ಪದಿ ಸಾಹಿತ್ಯ. ಸಪ್ನ ಬುಕ್ ಹೌಸ್. ಬೆಂಗಳೂರು.
3. ರಾಜಪ್ಪ ದಳವಾಯಿ (2010). ಕನ್ನಡ ಸಾಹಿತ್ಯ ಕೋಶ. ದಳವಾಯಿ ಪ್ರಕಾಶನ. ಬೆಂಗಳೂರು.
4. ಮುಗಳಿ ರಂ. ಶ್ರೀ. (1996). ಕನ್ನಡ ಸಾಹಿತ್ಯ ಚರಿತ್ರೆ. ಸಮಾಜ ಪುಸ್ತಕಾಲಯ. ಧಾರವಾಡ.
5. ಸಿದ್ದಲಿಂಗಯ್ಯ ಜಿ. ಎಸ್. ಮತ್ತು ಕೃಷ್ಣಯ್ಯ ಎಚ್. ಎಂ. (ಸಂ) (2016). ಸಾಲುದೀಪಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.